ಜನಮಾಧ್ಯಮ

# ವಿ ಡಿ ಐ ಟಿ ಮಾಜಿ ವಿದ್ಯಾರ್ಥಿಗಳ ಸಭೆ; ಪದಾಧಿಕಾರಿ ಆಯ್ಕೆ

**»ಜನಮಾಧ್ಯಮ, ಹಳಿಯಾಳ:** ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳವು ಮಾಜಿ ವಿದ್ಯಾರ್ಥಿಗಳ ಸಮ್ಮೇಳನವನ್ನು ಬೆಂಗಳೂರಿನ ಕನಿಷ್ಕ ಗ್ರ್ಯಾಂಡ್ ಹೋಟೆಲ್‌ನಲ್ಲಿ ಸಪ್ಟೆಂಬರ್ 29ರಂದು ಆಯೋಜಿಸಿತ್ತು.

ಮಹಾವಿದ್ಯಾಲಯವು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಎರಡು ದಶಕಗಳ ಸೇವೆ ಸಲ್ಲಿಸಿದ್ದು, ಕಳೆದ 20 ವರ್ಷಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಈ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಕಳೆದ ಎರಡು ದಶಕಗಳಲ್ಲಿ ವಿ ಡಿ ಐ ಟಿ ಸ್ಥಾಪಿಸಿರುವ ಮೈಲುಗಲ್ಲುಗಳ ಕುರಿತು ವಿವರಣೆ ನೀಡಿದರು. ಮಹಾವಿದ್ಯಾಲಯದ ಪ್ರಗತಿಗೆ ಮಾಜಿ ವಿದ್ಯಾರ್ಥಿಗಳ ಸಹಾಯ, ಸಹಕಾರ ಹಾಗೂ ಮಾರ್ಗದರ್ಶನ ಅತ್ಯಗತ್ಯವಾಗಿದ್ದು, ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಬೇಕೆಂದು ಹೇಳಿದರು. ಕೈಗಾರಿಕಾ ಕ್ಷೇತ್ರದಲ್ಲಿನ ನೂತನ ತಂತ್ರಜ್ಞಾನ ಹಾಗೂ ಬದಲಾವಣೆಗಳ




ಕುರಿತು ಮಾಜಿ ವಿದ್ಯಾರ್ಥಿಗಳು ಈಗಾಗಲೇ ಅರಿವು ಮೂಡಿಸುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಹೇಳಿದರು. ಮಾಜಿ ವಿದ್ಯಾರ್ಥಿಗಳು ಮಹಾವಿದ್ಯಾಲಯದಲ್ಲಿ ಕಳೆದ ದಿನಗಳನ್ನು ನೆನೆಯುತ್ತ, ಇಂತಹ ಮಾಜಿ ವಿದ್ಯಾರ್ಥಿ ಸಮ್ಮೇಳನಗಳು ಮಹಾವಿದ್ಯಾಲಯದೊಂದಿಗೆ ಬಾಂಧವ್ಯ ಸ್ಥಿರಗೊಳಿಸಲು ಸಹಕಾರಿಯಾಗುವುದು ಎಂದು ಹೇಳಿದರು. ತಮ್ಮ ವಿದ್ಯಾರ್ಥಿ ಜೀವನದಲ್ಲಿ ನೀಡಿದ ಮಾರ್ಗದರ್ಶನಕ್ಕಾಗಿ ಉಪನ್ಯಾಸಕರಿಗೆ ಕೃತಜ್ಞತೆ ಅರ್ಪಿಸಿದರು. ವಿ ಡಿ ಐ ಟಿ ಮಾಜಿ ವಿದ್ಯಾರ್ಥಿಗಳ ಸಂಘದ ನೂತನ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಶೆಟ್ಟರ (2015-19ಮೆಕ್ಯಾನಿಕಲ್), ಕಾರ್ಯದರ್ಶಿಗಳಾಗಿ ಕಾರ್ತಿಕ್ ಕಾಜಗಾರ್ ( 2016-20 ಸಿವಿಲ್ ವಿಭಾಗ ) ಮತ್ತು ರಮ್ಯಾ ಕಲ್ಲನಗೌಡರ್ ( 2020-24 ಕಂಪ್ಯೂಟರ್ ವಿಭಾಗ ) ಅಧಿಕಾರ ಸ್ವೀಕರಿಸಿದರು.ನೂರಾ ಐವತ್ತುಕ್ಕೂ ಅಧಿಕ ಮಾಜಿ ವಿದ್ಯಾರ್ಥಿಗಳು ತಮ್ಮ ಕುಟುಂಬ ಸಮೇತರಾಗಿ ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಪ್ರೊ. ಮಂಜುನಾಥ, ಡಾ. ಮಹೇಂದ್ರ ದೀಕ್ಷಿತ್, ಪ್ರೊ. ಸುಧೀರ್ ಕುಲಕರ್ಣಿ, ಡಾ. ಗುರುರಾಜ ಹತ್ತಿ , ಡಾ. ವೆಂಕಟೇಶ ಶಂಕರ್, ಡಾ. ಆಶಿಕ್ ಬಳ್ಳಾರಿ, ಡಾ. ಪೂರ್ಣಿಮಾ ರಾಯ್ಕರ, ಪ್ರೊ. ರಜತ್ ಆಚಾರ್ಯ, ಡಾ. ಸಮೀರ ಗಲಗಲಿ, ಡಾ. ಮೀನಲ್ ಕಲಿವಾಲ್ , ಪ್ರೊ. ರಂಗನಾಥ ಪಾಟೀಲ್, ಪ್ರೊ. ಎ ವಿ ಕೊಳಕಿ, ಡಾ. ವಿನೋದ್ ನಾಯಕ್,ಪ್ರೊ. ಹರ್ಷ ಜಾಧವ್, ಪ್ರೊ. ವರಪ್ರಸಾದ್ ಜಿ., ಪ್ರೊ. ಸೂರಜ್ ಕೆ., ಪ್ರೊ. ಫರಜಾನ ಎನ್., ಪ್ರೊ. ಜಯಶ್ರೀ ಎಸ್., ಪ್ರೊ. ಶ್ರೀಗೌರಿ, ಪ್ರೊ. ವಿಜಯಲಕ್ಷ್ಮಿ ಕೆ., ಪ್ರೊ. ಹರ್ಷವರ್ಧ ಗದಿಗೆಪ್ಪಾ ಯಳ್ಳುರ, ಸುನಿಲ್ ಯರಗಟ್ಟಿ ಉಪಸ್ಥಿತರಿದ್ದರು. ಪ್ರೊ. ಪ್ಲಾಸಿನ್ ಡಿ ಮತ್ತು ಪ್ರೊ. ಗುರುರಾಜ್ ಜೋಶಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.